**ಹುಬ್ಬಳ್ಳಿ - ಧಾರವಾಡ ನಗರದಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು**

1090 : (1543)

**ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ** (ಧಾರವಾಡ) : ಮಾನ್ಯನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ಕಳೆದ 3ವರ್ಷಗಳಲ್ಲಿ ಹುಬ್ಬಳ್ಳಿ ನಗರದಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು ಯಾವುವು (ವಿವರ ಒದಗಿಸುವುದು)

ಆ) ಬೆಳೆಯುತ್ತಿರುವ ಮಹಾನಗರದಲ್ಲಿನ ಜನಸಂಖ್ಯೆ ಬಡಾವಣೆಗಳು ಮತ್ತು ರಸ್ತೆಗಳ ಮೇಲೆ ವಾಹನಗಳ ದಟ್ಟಣೆಯಿಂದ ಆಗುತ್ತಿರುವ ಅಪಘಾತಗಳನ್ನು ತಪ್ಪಿಸಲು ಹೊಸ ಪ್ರಮುಖ ಎರಡು ನಗರ ಜೋಡಿಸುವ ರಸ್ತೆಗಳ ಯೋಜನೆ ಏನಾದರೂ ಇದೆಯೇ?

ಇ) ಮಹಾನಗರ ವಿಮಾನ ನಿಲ್ದಾಣದಿಂದ ಸಂಪರ್ಕ ಕಲ್ಪಿಸಲು ಹಾಗೂ ವ್ಯಾಪಾರ ಉದ್ದಿಮೆಯ ದೃಷ್ಟಿಯಿಂದ ಒಂದು ದೊಡ್ಡ ಎರಡು ನಗರದ ಮಧ್ಯದಲ್ಲಿ ಹೆದ್ದಾರಿ ರಚಿಸುವ ಯೋಜನೆ ಯಾವ ಹಂತದಲ್ಲಿದೆ.

ಈ) ಮಹಾನಗರ ಸುಂದರವಾಗಿ ಬೆಳೆಯಲು ಎಷ್ಟು ವಿಸ್ತೀರ್ಣ ಜಮೀನು ಸ್ವಾಧೀನ ಪಡಿಸಿಕೊಂಡಿದೆ :ಎಷ್ಟು ವಿಸ್ತೀರ್ಣದ ಜಮೀನನ್ನು ಬಿಟ್ಟುಕೊಟ್ಟಿದೆ. (ಐದುವರ್ಷಗಳ ಈ ವರೆಗಿನ ಪ್ರತ್ಯೇಕ ವಿವರ ನೀಡುವಿರಾ?)

ಉ) ಅಭಿವೃದ್ಧಿಪ್ರಾಧಿಕಾರದಲ್ಲಿ ಚುನಾಯಿತ ಪ್ರತಿನಿಧಿಗಳ ಜೊತೆಯಲ್ಲಿ ಸರ್ಕಾರ ನಾಮಿನೇಟ್ ಮಾಡಿದ ಸದಸ್ಯರಿಂದ ಆಗಿರುವ ಲಾಭಗಳೇನು (ಪ್ರತಿವರ್ಷಗಳಲ್ಲಿ ತಿಳಿಸುವಿರಾ)

**ಶ್ರೀ ಎಂ. ಎಸ್. ಪಾಟೀಲ್** (ನಗರಾಭಿವೃದ್ಧಿ ಸಚಿವರು) :

ಅ) ಅನುಬಂಧ 'ಅ'ದಲ್ಲಿ ವಿವರ ಲಗತ್ತಿಸಿದೆ.

ಆ) ಸರ್ಕಾರವು ಹುಬ್ಬಳ್ಳಿ-ಧಾರವಾಡ ನಗರಕ್ಕೆ ಸಂಬಂಧಿಸಿದಂತೆ ವ್ಯಾಪಕಾಭಿವೃದ್ಧಿ ಯೋಜನೆಯನ್ನು ತಯಾರಿಸಿದೆ. ಸದರಿ ಯೋಜನೆಯಲ್ಲಿ ಹುಬ್ಬಳ್ಳಿ-ಧಾರವಾಡನಗರದ ಮಧ್ಯದಲ್ಲಿ ಹಾಯ್ದು ಹೋಗಿರುವ ರಾಷ್ಟ್ರೀಯ ಹೆದ್ದಾರಿಗೆ ಪೂರಕವಾಗಿ ಬೈಪಾಸ್ ರಸ್ತೆಯನ್ನು ಅಳವಡಿಸಲಾಗಿದೆ. ಸದರಿ ರಸ್ತೆಯ ನಿರ್ಮಾಣವು ಪ್ರಗತಿಯಲ್ಲಿರುತ್ತದೆ. ಇದನ್ನು ಹೊರತುಪಡಿಸಿ ರಸ್ತೆಗಳ ಮೇಲೆ ವಾಹನ ಜನದಟ್ಟಣೆಯಿಂದ ಆಗುತ್ತಿರುವ ಅಪಘಾತಗಳನ್ನು ತಪ್ಪಿಸಲು ಪ್ರತಿನಗರದ ಯೋಜನೆಯಲ್ಲಿ ರಿಂಗ್ ರಸ್ತೆಯನ್ನು ಅಭಿವೃದ್ಧಿಗಾಗಿ ಬಡಾವಣೆ ರಚಿಸಲು ವಿನ್ಯಾಸವನ್ನು ಅನುಮೋದಿಸುವಾಗ ರಸ್ತೆ ಅಳವಡಿಸಿ ಅಭಿವೃದ್ಧಿಪಡಿಸಲು ಕ್ರಮಕ್ಕೆಗೊಳ್ಳಲಾಗುತ್ತಿದೆ.

ಇ) ಯಾವುದೇ ಹೊಸಯೋಜನೆಗಳು ಇರುವುದಿಲ್ಲ. ಈಗಾಗಲೇ ಹಾಲಿ ಇರುವ ಗೋಕುಲ ರಸ್ತೆಯು ಹೊಸದಾಗಿ ನಿರ್ಮಾಣವಾಗುತ್ತಿರುವ ಬೈಪಾಸ್ ರಸ್ತೆಗೆ ತಾರಿಹಾಳ ಕೈಗಾರಿಕೆ ಹತ್ತಿರ ಸಂಪರ್ಕ ಹೊಂದಿರುತ್ತದೆ. ಇದರಿಂದ ಅವಳಿ ನಗರಕ್ಕೆ ವಿಮಾನನಿಲ್ದಾಣದಿಂದ ನೇರ ಸಂಪರ್ಕ ಕಲ್ಪಿಸಿದಂತೆ ಆಗುತ್ತದೆ. ಹಾಗೂ ವ್ಯಾಪಕಾಭಿವೃದ್ಧಿ ಯೋಜನೆಯಂತೆ ಪ್ರಸ್ತಾಪಿತ ರಸ್ತೆ ಅಭಿವೃದ್ಧಿಪಡಿಸುವಲ್ಲಿ ಹಳೆಯ ಹಾಗೂ ಹೊಸದಾಗಿ ರಚಿತವಾಗುತ್ತಿರುವ ರಾಷ್ಟ್ರೀಯ ಹೆದ್ದಾರಿಗಳ ಮುಖಾಂತರ ಅವಳಿ ನಗರಗಳಿಗೆ ವಿಮಾನ ನಿಲ್ದಾಣದಿಂದ ನೇರ ಸಂಪರ್ಕ ಲಭ್ಯವಾಗುತ್ತದೆ.

| | | |
|---|---|---|
| ಈ) 1994-95 | ಎ.ಗು.ಆ. | ಕೈಬಿಟ್ಟಿದ್ದು |
| 95-96 ಉಣಕಲ್‌ನಲ್ಲಿ | 62.32 | 2ಎ.7ಗುಂಟೆ |
| 1996-97ಬೈರಿದೇವರ | | |
| ಕೊಪ್ಪ | 196 ಎ.3 8 ಗು- | 16 ಎ.34ಗುಂ- |
| ಗಬ್ಬೂರು | 114ಎ.00 | - |
| ಸತ್ತೂರು ತಡಸಿನ | 228ಎ.01ಗು | 75. 00 |
| ಕೊಪ್ಪ | | |
| 1997-98 | - | - |
| 98-99 | - | - |
| ಒಟ್ಟು | 601ಎ.31ಗುಂ | 94ಎ.1ಗುಂಟೆ |

ಒಟ್ಟು 601-31ಕ್ಷೇತ್ರವನ್ನು ಭೂಸ್ವಾಧೀನದಲ್ಲಿ ಉಳವಡಿಸಿದ್ದು ಈಪೈಕಿ 94ಎಕರೆ 1ಗುಂಟೆಗಳಷ್ಟು ಕ್ಷೇತ್ರವನ್ನು ಸರ್ಕಾರದ ಆದೇಶದ ಮೇರೆಗೆ ಕೈಬಿಡಲಾಗಿದೆ. ಸ್ವಾಧೀನಪಡಿಸಿಕೊಂಡ 601-31ಕ್ಷೇತ್ರದಲ್ಲಿ ಸತ್ತೂರು ತಡಸಿನ ಕೊಪ್ಪ ಗ್ರಾಮದಲ್ಲಿ ಭೂಸ್ವಾಧೀನಪಡಿಸಿಕೊಂಡ 228.01ಗುಂಟೆ ಕ್ಷೇತ್ರದಲ್ಲಿ ಇಲ್ಲಿಯವರೆಗೆ 155ಎಕರೆ ಕ್ಷೇತ್ರವನ್ನು ಪರಿಹಾರಧನ ಸಂದಾಯಮಾಡಿ ಕಬ್ಜಾಪಡೆಯಲಾಗಿದ್ದು ಉಳಿಯುವ 73 ಎಕರೆ ಕ್ಷೇತ್ರಕ್ಕೆ ಪರಿಹಾರಧನ ಸಂದಾಯಮಾಡಿ ಕಬ್ಜಾ ಪಡೆಯಲಾಗಿದೆ.

ಉ) ಸೂಕ್ತ ಸಲಹೆಗಳನ್ನು ಪ್ರತಿ ಸಭೆಯಲ್ಲಿ ನೀಡಿರುತ್ತಾರೆ.

ಅನುಬಂಧ-ಅ

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ಕಳೆದ ಮೂರು ವರ್ಷಗಳಲ್ಲಿ ಹುಬ್ಬಳ್ಳಿ ನಗರದಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ವಿವರ ಈ ಕೆಳಗೆ ನಮೂದಿಸಿದಂತಿದೆ.

| ಕ್ರಮ ಸಂಖ್ಯೆ | ಕಾಮಗಾರಿಗಳ ವಿವರ | ಒಟ್ಟು ವೆಚ್ಚ ಲಕ್ಷರೂ. |
|---|---|---|
| 1. | ರಾಯನಾಳ ರಿ.ಸರ್ವೆ ನಂ: 88 ಒಂದನೇ ಹಂತದಲ್ಲಿ ಗಟಾರ ನಿರ್ಮಾಣ | 57.81 |
| 2. | ರಾಯನಾಳ ರಿ.ಸರ್ವೆ ನಂ: 87 (ಭಾಗ) ರಿ. ಸ.ನಂ : 118ಸಿ, ಹಾಗೂ ಬಿ ಎರಡನೇ ಹಂತದಲ್ಲಿ ರಸ್ತೆ ಮಣ್ಣಿನ ಕಾಮಗಾರಿ, ಖಡಿ ರಸ್ತೆನಿರ್ಮಾಣ, ಡ್ರೇನುಗಳನಿರ್ಮಾಣ | 159.77 |
| 3. | ಅಯೋಧ್ಯಾ ರಿ.ಸ.ನಂ : 11:2ಬಿ,11:3ಬಿ (ಇಸ್ಲಾಮಪೂರ ರಸ್ತೆ) ವಿನ್ಯಾಸದಲ್ಲಿ ರಸ್ತೆ, ಡ್ರೇನು, ವಿದ್ಯುದ್ದೀಕರಣ ನೀರು ಸರಬರಾಜು, ಹಾಗೂ ಒಳಚರಂಡಿ ಕಾಮಗಾರಿಗಳು. | 27.86 |
| 4. | ಉಣಕಲ್ ರಿ.ಸ.ನಂ : 603 :112 (ಔದ್ಯಮಿಕ ವಿನ್ಯಾಸ) ದಲ್ಲಿ ಒಳಚರಂಡಿ ಹಾಗೂ ಕಂಜುಮರ್ ಲೈನ್ ಕಾಮಗಾರಿಗಳು. | 17.77 |
| 5. | ಉಣಕಲ್ ರಿ.ಸ.ನಂ : 621 (ಕೆ.ಇ.ಸಿ.ಎದುರಿಗೆ) ವಿನ್ಯಾಸದಲ್ಲಿ ಡ್ರೇನುಗಳನಿರ್ಮಾಣ | 6.63 |
| 6. | ಉಣಕಲ್ ರಿ.ಸ.ನಂ :612, 613:2 (ಅರ್ಜುನವಿಹಾರ) ವಿನ್ಯಾಸದಲ್ಲಿ ಒಳಚರಡಿ ಕಾಮಗಾರಿಗಳು | 18.25 |
| 7. | ಕೃಷ್ಣಾಪೂರ ರಿ.ಸ.ನಂ : 102:2 (ಶಕ್ತಿನಗರ) ವಿನ್ಯಾಸದಲ್ಲಿ ಒಳಚರಂಡಿ ಕಾಮಗಾರಿ ಹಾಗೂ ಮುಖ್ಯರಸ್ತೆಗಳ ಡಾಂಬರೀಕರಣ. | 21.94 |
| 8. | ಉಣಕಲ್ ರಿ.ಸ.ನಂ : 628ಎ:1ಬಿ (ರೇಣುಕಾ ನಗರ ಹತ್ತಿರ) ವಿನ್ಯಾಸದಲ್ಲಿ ವಿದ್ಯುತ್ ಕಾಮಗಾರಿ. | 1.44 |
| 9. | ಅಯೋಧ್ಯಾ ರಿ.ಸ.ನಂ : 157:1ಎ, (ಸೀಮ್ಲಾನಗರ ಹತ್ತಿರ) ವಿನ್ಯಾಸದಲ್ಲಿ ರಸ್ತೆ ಗಟಾರ, ನೀರು ಸರಬರಾಜು ಹಾಗೂ ಒಳಚರಂಡಿ ಕಾಮಗಾರಿಗಳು. | 12.86 |
| 10 | .ಗಾಮನಗಟ್ಟಿ ರಿ.ಸ.ನಂ : 329.2ಎ (ಶಿವಾನಂದ ಮಠದ ಹತ್ತಿರ) ವಿನ್ಯಾಸದಲ್ಲಿ ನೀರು ಸರಬರಾಜು ಹಾಗೂ ವಿದ್ಯುತ್ ಕಾಮಗಾರಿಗಳು. | 6.54 |
| 11. | ಸುತಗಟ್ಟಿ ರಿ.ಸ.ನಂ: 116:2ವಿನ್ಯಾಸದಲ್ಲಿ ವಿದ್ಯುತ್ ಕಾಮಗಾರಿಗಳು | 2.61 |